Vol 6 Issue 11 Dec 2016

ISSN No : 2230-7850

International Multidisciplinary Research Journal

# Indian Streams Research Journal

Executive Editor
Ashok Yakkaldevi

Editor-in-Chief
H.N.Jagtap

**Welcome to ISRJ**

**RNI MAHMUL/2011/38595** **ISSN No.2230-7850**

Indian Streams Research Journal is a multidisciplinary research journal, published monthly in English, Hindi & Marathi Language. All research papers submitted to the journal will be double - blind peer reviewed referred by members of the editorial board.Readers will include investigator in universities, research institutes government and industry with research interest in the general subjects.

**Regional Editor**

Dr. T. Manichander

Mr. Dikonda Govardhan Krushanahari
Professor and Researcher ,
Rayat shikshan sanstha's, Rajarshi Chhatrapati Shahu College, Kolhapur.

## *International Advisory Board*

Kamani Perera
Regional Center For Strategic Studies, Sri Lanka

Janaki Sinnasamy
Librarian, University of Malaya

Romona Mihaila
Spiru Haret University, Romania

Delia Serbescu
Spiru Haret University, Bucharest, Romania

Anurag Misra
DBS College, Kanpur

Titus PopPhD, Partium Christian University, Oradea,Romania

Mohammad Hailat
Dept. of Mathematical Sciences, University of South Carolina Aiken

Abdullah Sabbagh
Engineering Studies, Sydney

Ecaterina Patrascu
Spiru Haret University, Bucharest

Loredana Bosca
Spiru Haret University, Romania

Fabricio Moraes de Almeida
Federal University of Rondonia, Brazil

George - Calin SERITAN
Faculty of Philosophy and Socio-Political Sciences Al. I. Cuza University, Iasi

Hasan Baktir
English Language and Literature Department, Kayseri

Ghayoor Abbas Chotana
Dept of Chemistry, Lahore University of Management Sciences[PK]

Anna Maria Constantinovici
AL. I. Cuza University, Romania

Ilie Pintea,
Spiru Haret University, Romania

Xiaohua Yang
PhD, USA

......More

## *Editorial Board*

Pratap Vyamktrao Naikwade
ASP College Devrukh,Ratnagiri,MS India

R. R. Patil
Head Geology Department Solapur University,Solapur

Rama Bhosale
Prin. and Jt. Director Higher Education, Panvel

Salve R. N.
Department of Sociology, Shivaji University,Kolhapur

Govind P. Shinde
Bharati Vidyapeeth School of Distance Education Center, Navi Mumbai

Chakane Sanjay Dnyaneshwar
Arts, Science & Commerce College, Indapur, Pune

Awadhesh Kumar Shirotriya
Secretary,Play India Play,Meerut(U.P.)

Iresh Swami
Ex - VC. Solapur University, Solapur

N.S. Dhaygude
Ex. Prin. Dayanand College, Solapur

Narendra Kadu
Jt. Director Higher Education, Pune

K. M. Bhandarkar
Praful Patel College of Education, Gondia

Sonal Singh
Vikram University, Ujjain

G. P. Patankar
S. D. M. Degree College, Honavar, Karnataka

Maj. S. Bakhtiar Choudhary
Director,Hyderabad AP India.

S.Parvathi Devi
Ph.D.-University of Allahabad

Sonal Singh,
Vikram University, Ujjain

Rajendra Shendge
Director, B.C.U.D. Solapur University, Solapur

R. R. Yalikar
Director Managment Institute, Solapur

Umesh Rajderkar
Head Humanities & Social Science YCMOU,Nashik

S. R. Pandya
Head Education Dept. Mumbai University, Mumbai

Alka Darshan Shrivastava
Shaskiya Snatkottar Mahavidyalaya, Dhar

Rahul Shriram Sudke
Devi Ahilya Vishwavidyalaya, Indore

S.KANNAN
Annamalai University,TN

Satish Kumar Kalhotra
Maulana Azad National Urdu University

**Address:-Ashok Yakkaldevi 258/34, Raviwar Peth, Solapur - 413 005 Maharashtra, India**
**Cell : 9595 359 435, Ph No: 02172372010 Email: ayisrj@yahoo.in Website: www.isrj.org**

Indian Streams Research Journal

ISSN: 2230-7850 Impact Factor : 4.1625(UIF) Volume - 6 | Issue - 11 | December - 2016

# ವಿಶೇಷ ಸಾಮರ್ಥ್ಯವುಳ್ಳವರ ಪರಿಕಲ್ಪನೆ ಮತ್ತು ಕಾನೂನುಗಳು :ಒಂದು ಒಳನೋಟ

ಪಶಾಂತ್ ಎಂ[1] , ಡಾ.ಎಸ್ ಯಶೋಧ ಎಂ.ಎ,ಪಿಹೆಚ್.ಡಿ [2]

[1]ಸಂಶೋಧಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ , ಮಾನಸ ಗಂಗೋತ್ರಿ, ಮೈಸೂರು.

[2]ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ , ಮಾನಸ ಗಂಗೋತ್ರಿ,ಮೈಸೂರು.

ಮಾನವ ಸಮಾಜದಲ್ಲಿ ವಿಶೇಷ ಸಾಮರ್ಥ್ಯತೆ(ಅಂಗವಿಕಲತೆ) ಅಸಾಮಾನ್ಯವಾದುದೇನಲ್ಲ. ಅನಾದಿ ಕಾಲದಿಂದಲೂ ವಿಶೇಷ ಸಾಮರ್ಥ್ಯತೆ ಜೀವಿಗಳನ್ನು ಕಾಡುತ್ತಿರುವ ಪ್ರಮುಖ ನ್ಯೂನ್ಯತೆಯಾಗಿದೆ. ಪೂರ್ವ ಕಾಲದಲ್ಲಿ ವಿಶೇಷ ಸಾಮರ್ಥ್ಯತೆ ಇದ್ದ ಸಾಮಾನ್ಯ ಜನರು ಇತರರಂತೆ ಬದುಕುವುದು ಸರಳವಾಗಿರಲಿಲ್ಲ. ವಿಶೇಷ ಸಾಮರ್ಥ್ಯತೆವುಳ್ಳವರನ್ನು ಶಾಪಗ್ರಸ್ತರೆಂದು ಭಾವಿಸಿ ಅವರನ್ನು ಜೀವಿಸಲು ಅನರ್ಹರೆಂದು ಪರಿಗಣಿಸಿ ಮರಣಕ್ಕೆ ಗುರಿ ಮಾಡುತ್ತಿದ್ದ ಕಾಲವೊಂದಿತ್ತು. ನಾಗರಿಕತೆ ಬೆಳೆದಂತೆ ಮಾನವನ ಜೀವನ ಕ್ರಮ ಕೂಡ ಬದಲಾಗಿದೆ ಹಾಗೂ ವಿಶೇಷ ಸಾಮರ್ಥ್ಯತೆವುಳ್ಳವರು ಕೂಡ ಇತರೇ ಸಾಮಾನ್ಯ ಜನರಂತೆ ಬದುಕಲು ಅರ್ಹರೆಂದು ಪರಿಗಣಿಸಿ ಅವರಿಗೆ ಕರುಣೆ, ಸಹಾನುಭೂತಿ ವ್ಯಕ್ತಪಡಿಸುತ್ತಿದ್ದಾರೆ. ಆದರೆ ವಿಶೇಷ ಸಾಮರ್ಥ್ಯತೆವುಳ್ಳವರು ಇದನ್ನ ಪರಿಗಣಿಸದೆ, ತಮ್ಮ ಸಾಧನೆಯ ಹಾದಿಯಲ್ಲಿ ವಿಶೇಷ ಸಾಮರ್ಥ್ಯತೆ ತೊಡಕಲ್ಲ ಎಂದು ಭಾವಿಸಿ ತಮ್ಮಲಿ ಗುಪ್ತವಾಗಿರುವ ದೈಹಿಕ ಸಾಮಾರ್ಥ್ಯದ ಮೇಲೆ ಅವಲಂಬಿತವಾಗಿರದೆ ತಮ್ಮ ಅಂತಃಶಕ್ತಿ ಮತ್ತು ಮನೋಬಲವೊಂದಿದ್ದರೆ ಏನನ್ನಾದರೂ ಸಾಧಿಸಬಹುದೆಂಬ



ಅಂಬಲದಲ್ಲಿದ್ದಾರೆ. ವಿಶೇಷ ಸಾಮರ್ಥ್ಯತೆವುಳ್ಳವರ ಶಿಕ್ಷಣಕ್ಕೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಸರ್ಕಾರವು ಸಹ ನೀತಿ ನಿಯಮಗಳನ್ನು ರೂಪಿಸಿದೆ. ಅದರಲ್ಲೂ ಅಧಿನಿಯಮ–1995ರ(ಸಮಾನ ಅವಕಾಶಗಳ ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಪ್ರತಿಫಲವಾಗಿ ವಿಶೇಷ ಸಾಮರ್ಥ್ಯತೆವುಳ್ಳವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಬಲರಾಗುತ್ತಾ ಸಾಮರ್ಥ್ಯಕ್ಕೂ ಮೀರಿದ ಸಾಧನೆಗಳನ್ನು ಮಾಡಿ "ಎಲ್ಲರಂತೆ ನಾವು" ಎಂಬ ಭಾವನೆಯೊಂದಿಗೆ ಸಮಾಜದಲ್ಲಿ ಅಸ್ಥಿತ್ವವನ್ನು ಉಳಿಸಿಕೊಳ್ಳಲು ಪ್ರಗತಿಯ ಪಥದಲ್ಲಿ ಸಾಗುತ್ತಿದ್ದಾರೆ.

ಅಂಗವಿಕಲರು ಎಂಬ ಶಬ್ಧವನ್ನು ಸರಳವಾಗಿ ವಿವರಿಸುವುದು ಕಷ್ಟ, ಸಾಮಾನ್ಯ ದೃಷ್ಠಿಯಿಂದ ಶರೀರದ ಕೆಲವು ಭಾಗಗಳು ಸಂಪೂರ್ಣವಾಗಿ ನಿರುಪಯೋಗವಾಗಿರುವ ಅಥವಾ ಸ್ವಲ್ಪ ಮಟ್ಟಿಗೆ ಮಾತ್ರ ಉಪಯೋಗಿಸಲು ಸಾಧ್ಯವಾಗುವ ಎಲ್ಲಾ ವ್ಯಕ್ತಿಗಳನ್ನು ಅಂಗವಿಕಲರೆಂದು ಪರಿಗಣಿಸಬಹುದು. ಅಂಗವಿಕಲರು ಎಂಬ ಶಬ್ಧಕ್ಕೆ ಸಂಬಂಧಿಸಿದಂತೆ ಆಗಿಂದಾಗ್ಗೆ ಬದಲಾವಣೆಗಳು ಆಗಿವೆ. ಮೊದಲಿಗೆ ಇವರನ್ನು "ಊನಶಕ್ತರು" ನಂತರದಲ್ಲಿ "ವಿಶಿಷ್ಠವಾಗಿ ಶಕ್ತರು" ಎಂದು ಬದಲಾಯಿಸಲಾಯಿತು ವಿಶೇಷ ಅವಶ್ಯಕತೆವುಳ್ಳವರು, ನ್ಯೂನ್ಯತೆಉಳ್ಳವರು ಮತ್ತು ಅಂಗವಿಕಲರು,ವಿಕಲಾಂಗ,ಅಗತ್ಯವುಳ್ಳ ವ್ಯಕ್ತಿಗಳು,ವಿಕಲಚೇತನರು,ಭಿನ್ನಸಮರ್ಥರು, ಅವಕಾಶ ವಂಚಿತರು, ವಿವಿಧ ಸಾಮಾರ್ಥ್ಯವುಳ್ಳವರು, ಮರ್ಷಾಂತರಗಳಾದ ಈ ಪದಗಳನ್ನು ಒಂದರ ಬದಲು ಮತ್ತೊಂದು ಆಗಿ, ಕೆಲವು ವೇಳೆ ಅಜಾಗರುಕತೆಯಿಂದ ಉಪಯೋಗಿಸಲ್ಪಟ್ಟಿದೆ. ಪ್ರಸ್ತುತದಲ್ಲಿ ಇವರನ್ನು ವಿಶೇಷ ಸಾಮರ್ಥ್ಯವುಳ್ಳವರು ಎಂದು ಕರೆಯಲಾಗುತ್ತಿದೆ. ಪ್ರಧಾನ ಮಂತ್ರಿ ನರೇಂದ್ರಮೋದಿ ರವರು "ಮನ್‌ಕಿ ಬಾತ್" 3ನೇ ಆವೃತ್ತಿಯಲ್ಲಿ ಇವರನ್ನು ದಿವ್ಯಾಂಗರು ಎಂದು ತಿಳಿಸಿದ್ದಾರೆ. ಈ ಎಲ್ಲಾ ಪದಗಳಿಗೆ ವಿಶೇಷ ಅರ್ಥಗಳು ಮತ್ತು ಭಾವನೆಯಲ್ಲಿ ವ್ಯತ್ಯಾಸಗಳು ಇವೆ.

ವಿಶೇಷ ಸಾಮರ್ಥ್ಯವುಳ್ಳವರು (ಅಂಗವಿಕಲರು) ಎಂದರೇನು?

ದೇಹದ ಯಾವುದಾದರು ಒಂದು ಅಥವಾ ಹೆಚ್ಚು ಅಂಗಾಂಗಗಳು ಊನವಾಗಿದ್ದು, ಅದರಿಂದ ಒಬ್ಬ ವ್ಯಕ್ತಿ ತನ್ನ ದೈನಂದಿನ ಚಟುವಟಿಕೆಗಳನ್ನು ಸ್ವತಹ ಮಾಡಿಕೊಳ್ಳಲು ಅಸಮರ್ಥನಾಗಿದ್ದರೆ ಆ ವ್ಯಕ್ತಿಯನ್ನು ಅಂಗವಿಕಲ ಎನ್ನುತ್ತೇವೆ. ಅಂಗವಿಕಲರ ಅಧಿನಿಯಮದ ಪ್ರಕಾರ "ಅಂಗವಿಕಲ ವ್ಯಕ್ತಿ ಎಂದರೆ ಶೇ.40ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತೊಂದರೆಯಿದ್ದು ವೈದ್ಯಕೀಯ ಪ್ರಾಧಿಕಾರದಿಂದ ಪ್ರಮಾಣ ಪತ್ರ ಹೊಂದಿರುವ ವ್ಯಕ್ತಿ"

ವಿಶೇಷ ಸಾಮರ್ಥ್ಯವುಳ್ಳವರು ಸಮಾಜದ ಮುಖ್ಯವಾಹಿನಿಯಲ್ಲಿ ಭಾಗವಹಿಸಲು ಸರ್ಕಾರ, ಸಮುದಾಯಗಳ ಪಾತ್ರ ಅತಿ ಮುಖ್ಯವಾಗಿರುತ್ತದೆ. ವಿಶೇಷ ಸಾಮರ್ಥ್ಯವುಳ್ಳವರಿಗೆ ಅವಕಾಶ ನೀಡಿದಲ್ಲಿ ಇತರರಂತೆ ತಮ್ಮ ಸ್ವಸಾಮರ್ಥ್ಯದಿಂದ ಸಮಾಜದಲ್ಲಿ ಪಾಲ್ಗೊಳ್ಳುತ್ತಾರೆ. ಆಟೋಟಗಳಲ್ಲಿ

Volume - 6 | Issue - 11 | December - 2016

ಭಾಗವಹಿಸಬಲ್ಲರು. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಬಲ್ಲರು. ಉದ್ಯೋಗ ಕ್ಷೇತ್ರದಲ್ಲೂ ಸಾಮಾನ್ಯರಂತೆ ಕೆಲಸ ಮಾಡಬಲ್ಲರು. ಅನೇಕ ವಿಶೇಷಚೇತನರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾ ಸ್ವರ್ಧೆ, ಸಾಂಸ್ಕೃತಿಕ ಸ್ವರ್ಧೆಗಳಲ್ಲಿ ಭಾಗವಹಿಸಿರುವ ನಿದರ್ಶನಗಳು ಬಹಳಷ್ಟಿವೆ. ಇವರ ಜನಸಂಖ್ಯೆಯು 2011ನೇ ಭಾರತದ ಜನಗಣತಿ ಪ್ರಕಾರ ಭಾರತದಲ್ಲಿ ಒಟ್ಟು 2,68,10,557 ಕೋಟಿ ಜನರು ವಿಶೇಷ ಸಾಮರ್ಥ್ಯವುಳ್ಳವರು ಇದ್ದಾರೆ, ಕರ್ನಾಟಕದಲ್ಲಿ 13,24,205 ವಿಶೇಷ ಸಾಮರ್ಥ್ಯವುಳ್ಳವರು ಕಂಡು ಬರುತ್ತಾರೆ,ಇದರಲ್ಲಿ ದೃಷ್ಠಿದೋಷವುಳ್ಳವರು 2,64,170 ವಾಕ್ ಮತ್ತು ಶ್ರವಣದೋಷವುಳ್ಳವರು 3,26,432 ಬುದ್ದಿಮಾಂದ್ಯರು/ಮಾನಸಿಕ ಅಸ್ವಸ್ಥರು 1,14,887 ದೈಹಿಕ ವಿಕಲಾಂಗರು 2,71,982 ರಷ್ಟು ಇದ್ದಾರೆ ಕರ್ನಾಟಕದಲ್ಲಿ ಜಿಲ್ಲಾವಾರು ಅಂಕಿ ಅಂಶಗಳನ್ನು ಗಮನಿಸಿದಾಗ ಹೆಚ್ಚಿನ ಪ್ರಮಾಣದಲ್ಲಿ ವಿಶೇಷ ಸಾಮರ್ಥ್ಯವುಳ್ಳವರು ಬೆಂಗಳೂರು ನಗರದಲ್ಲಿರುವುದು ಈ ಮುಂದಿನ ಕೋಷ್ಠಕದ ಮೂಲಕ ತಿಳಿದು ಬರುತ್ತದೆ.

2011ರ ಜನಗಣತಿ ಪ್ರಕಾರ ಕರ್ನಾಟಕದ ಜಿಲ್ಲಾವಾರು ವಿಶೇಷ ಸಾಮರ್ಥ್ಯವುಳ್ಳವರ ಅಂಕಿ ಅಂಶಗಳು

| | | | |
|---|---|---|---|
| 1.ಬೆಳಗಾವಿ | 92594 | 16.ಚಿಕ್ಕಮಗಳೂರು | 21224 |
| 2.ಬಾಗಲಕೋಟೆ | 43179 | 17.ತುಮಕೂರು | 58957 |
| 3.ವಿಜಯಪುರ | 43533 | **18.ಬೆಂಗಳೂರು** | **274230** |
| 4.ಬೀದರ್ | 42637 | 19.ಮಂಡ್ಯ | 36228 |
| 5.ರಾಯಚೂರು | 39366 | 20.ಹಾಸನ | 32232 |
| 6.ಕೊಪ್ಪಳ | 34599 | 21.ದಕ್ಷಿಣ ಕನ್ನಡ | 28095 |
| 7.ಗದಗ್ | 25114 | 22.ಕೊಡಗು | 7369 |
| 8.ಧಾರವಾಡ | 37221 | 23.ಮೈಸೂರು | 60470 |
| 9.ಉತ್ತರಕನ್ನಡ | 22593 | 24.ಚಾಮರಾಜನಗರ | 20464 |
| 10.ಹಾವೇರಿ | 37760 | 25.ಗುಲಬರ್ಗಾ | 66392 |
| 11.ಬಳ್ಳಾರಿ | 50895 | 26.ಯಾದಗಿರಿ | 24904 |
| 12.ಚಿತ್ರದುರ್ಗ | 35971 | 27.ಕೋಲಾರ | 32277 |
| 13.ದಾವಣಗೆರೆ | 40819 | 28.ಚಿಕ್ಕಬಳ್ಳಾಪುರ | 29894 |
| 14.ಶಿವಮೊಗ್ಗ | 28835 | 29.ಬೆಂಗಳೂರು ಗ್ರಾಮಾಂತರ | 20294 |
| 15.ಉಡುಪಿ | 16922 | 30.ರಾಮನಗರ | 19183 |

ಮೂಲ:2011 ರ ಜನಗಣತಿ ಭಾರತ ಸರ್ಕಾರ. ಒಟ್ಟು ಕರ್ನಾಟಕ 1324205

**ವಿಶೇಷ ಸಾಮರ್ಥ್ಯವುಳ್ಳವ ಸಂಬಂಧಪಟ್ಟ ಕಾನೂನುಗಳು**

ವಿಶೇಷ ಸಾಮರ್ಥ್ಯವುಳ್ಳವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಭಾರತದ ಸಂವಿಧಾನದ ಅಡಿಯಲ್ಲಿ ಹಲವು ಕಾಯ್ದೆಗಳನ್ನು ಜಾರಿಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾಯ್ದೆ ಹಾಗೂ ಒಡಂಬಡಿಕೆಗಳು ವಿಶೇಷ ಸಾಮರ್ಥ್ಯವುಳ್ಳವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ, ಅಂತಹ ಪ್ರಮುಖ ಕಾಯ್ದೆಗಳು ಎಂದರೆ....

- ಅಂಗವಿಕಲರ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗನಹಿಸುವಿಕೆ) ಕಾಯ್ದೆ–1995.
- ರಾಷ್ಟ್ರೀಯ ಟ್ರಸ್ಟ ಕಾಯಿದೆ (ಬುದ್ದಿಮಾಂದ್ಯತೆ ಮತ್ತು ಮಿದುಳುವಾತ ಆಟಿಸಂ ಮತ್ತು ತೀವ್ರ ತರಹದ ವಿಶೇಷ ಸಾಮರ್ಥ್ಯವುಳ್ಳವರು ಮಾತ್ರ).
- ಮಾನಸಿಕ ಆರೋಗ್ಯ ಅಧಿನಿಯಮ ಕಾಯ್ದೆ–1987
- ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯ ಕಾಯ್ದೆ–1992
- ಭಾರತ ಮತ್ತು ಅಂತರಾಷ್ಟ್ರೀಯ ಒಡಂಬಡಿಕೆ–2006: ವಿಶೇಷ ಸಾಮರ್ಥ್ಯವುಳ್ಳವರ ಒಡಂಬಡಿಕೆಯನ್ನು 13 ಡಿಸೆಂಬರ್ 2006ರಂದು 61ನೇ ಅಧಿವೇಶನದಲ್ಲಿ ಜಾರಿಗೆ ತರಲಾಯಿತು. ಇದು ವಿಶೇಷ ಸಾಮರ್ಥ್ಯವುಳ್ಳವರ ಹಕ್ಕುಗಳ ರಕ್ಷಣೆ ಉನ್ನತೀಕರಣಕ್ಕಾಗಿ ವಿಶ್ವ ಸಂಸ್ಥೆಯ 95 ರಾಷ್ಟ್ರಗಳ ನಡುವಿನ ಪರಸ್ಪರ ಒಡಂಬಡಿಕೆಯಾಗಿದೆ.

ರಾಷ್ಟ್ರೀಯ ಟ್ರಸ್ಟ ಕಾಯ್ದೆಯಡಿ ತಮ್ಮ ಹಿತಾಸಕ್ತಿಗಳನ್ನು ಸ್ವತಹ ಅಸಮರ್ಥರಾಗಿರುವಂತಹ ಗಂಭಿರವಾದ ಮತ್ತು ತೀವ್ರವಾದ ಮಾನಸಿಕ ಹಾಗೂ ಶಾರೀರಿಕ ವಿಕಲತೆಯುಳ್ಳವರ ರಕ್ಷಣೆಗಾಗಿ ಈ ಕಾಯ್ದೆಯನ್ನು ಜಾರಿಗೊಳಿಸಲಾಗುತ್ತಿದೆ. ಇಂತಹ ವಿಶೇಷ ಸಾಮರ್ಥ್ಯವುಳ್ಳವರಿಗೆ ಪೋಷಕರನ್ನು ನೇಮಿಸಿ ಪೋಷಕತ್ವ ಪ್ರಮಾಣ ಪತ್ರವನ್ನು ನೀಡಲು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಮೀತಿಯನ್ನು ರಚಿಸಲಾಗಿದೆ. ಈ ಕಾಯ್ದೆಯಡಿ ಇಂತಹವರಿಗಾಗಿ ಅಗಲು ಯೋಗಕ್ಷೇಮ ಕೇಂದ್ರ, ವಸತಿ ಸೌಕರ್ಯ ಒದಗಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ಸಹಾಯಧನವನ್ನು ಒದಗಿಸಲಾಗುತ್ತಿದೆ. ಅಂಗವಿಕಲರ ಅಧಿನಿಯಮ–95ನ್ನು ಅನುಷ್ಠಾನಗೊಳಿಸಲು ಅಧಿನಿಯಮದ ಕಚೇರಿಯನ್ನು ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಈ ಕಚೇರಿಗೆ ಓರ್ವ ಆಯುಕ್ತರನ್ನು ನೇಮಿಸಲಾಗಿದೆ. ಅಂಗವಿಕಲರ ಅಧಿನಿಯಮ 1995ರನುಸಾರ ಈ ಕೆಳಕಂಡಂತೆ 7 ವಿಶೇಷಸಾಮರ್ಥ್ಯತೆಯನ್ನು ಪರಿಗಣಿಸಲಾಗಿದೆ.

Volume - 6 | Issue - 11 | December - 2016

1.ಅಂಧತ್ವ ಅಥವಾ ದೃಷ್ಟಿದೋಷ
2.ದೈಹಿಕ ಅಂಗವಿಕಲರು
3.ಮಂದತ್ವ
4.ಬುದ್ದಿ ಮಾಂದ್ಯತೆ
5.ಮಾನಸಿಕ ಅಸ್ವಸ್ಥರು
6.ಶ್ರವಣ ದೋಷವುಳ್ಳವರು
7.ಕುಷ್ಠರೋಗ ನಿವಾರಿತರು

**ಅಧಿನಿಯಮ 1995ರ ಪ್ರಮುಖ ಸರಾಂಶಗಳು**

**1.ಜಾಗೃತಿ:** ವಿಶೇಷಸಾಮರ್ಥ್ಯತೆಯನ್ನು ತಡೆಗಟ್ಟುವುದು ಮತ್ತು ಪತ್ತೆ ಹಚ್ಚುವಲ್ಲಿ ಸಮೀಕ್ಷೆ, ತಪಾಸಣೆ ಮತ್ತು ಸಂಶೋಧನೆಯನ್ನು ಕೈಗೊಳ್ಳುವುದು, ತಡೆಗಟ್ಟುವಂತಹ ಕ್ರಮಗಳಿಗೆ ಉತ್ತೇಜನ ನೀಡುವುದು. ಶೀಘ್ರವಾಗಿ ಎಲ್ಲಾ ಮಕ್ಕಳ ತಪಾಸಣೆಯನ್ನು ಮಾಡುವುದು, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ಅಂಗವಿಕಲತೆಯ ಕಾರಣಗಳ ಬಗ್ಗೆ ತರಬೇತಿ ನೀಡುವುದು, ಆರೋಗ್ಯ ಮತ್ತು ವಾತಾವರಣದ ಸ್ವಚ್ಚತೆಯ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ವಿಶೇಷಸಾಮರ್ಥ್ಯತೆಯ ಕುರಿತು ಮುಂಜಾಗ್ರತಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು(ಗರ್ಭಾವಸ್ಥೆ, ಹೆರಿಗೆ ಮತ್ತು ಹೆರಿಗೆಯ ನಂತರ).ಶಾಲೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷಸಾಮರ್ಥ್ಯತೆಯ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಪತ್ರಿಕಾ ಮತ್ತು ದೃಶ್ಯ ಮಾದ್ಯಮಗಳ ಮೂಲಕ ವಿಶೇಷಸಾಮರ್ಥ್ಯತೆಯ ಕಾರಣಗಳು ಮತ್ತು ತಡೆಗಟ್ಟುವ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಯವುದು.

**2.ಶಿಕ್ಷಣ :** ವಿಶೇಷ ಶಾಲೆಗಳಲ್ಲಿ, ವೃತ್ತಿಪರ ತರಬೇತಿಗಳಿ ಸೌಲಭ್ಯವನ್ನು ಒದಗಿಸುವುದು, ಮುಕ್ತ ಶಾಲೆ ಹಾಗೂ ಮಕ್ತ ವಿಶ್ವ ವಿದ್ಯಾಲಯಗಳನ್ನು ತೇರೆಯಬೇಕು, ಅಂಗವಿಕಲರ ಶಿಕ್ಷಣಕ್ಕೆ ಬೇಕಾಗುವ ಸಾಧನ ಸಾಮಗ್ರಿಗಳ ಬಗ್ಗೆ ಸಂಶೋಧನೆ ಮಾಡುವ ಪ್ರಯತ್ನಗಳಿಗೆ ಹಣ ನೀಡಬೇಕು, ಸೂಕ್ತವಾದ ಸಾರಿಗೆ ಮಾಡಬೇಕು, ವಿಶೇಷ ತರಬೇತಿ ಕೇಂದ್ರಗಳ ಸ್ಥಾಪನೆ ಹಾಗೂ ಶಿಕ್ಷಕರಿಗೆ ತರಬೇತಿ ನೀಡುವ ಏರ್ಪಾಡು ಮಾಡಬೇಕು, ವಿಕಲಾಂಗರನ್ನು ಸಾಮಾನ್ಯ ಶಾಲೆಗಳಲ್ಲಿ ಸೇರಿಸಿಕೊಳ್ಳಬೇಕು, ಅಂಗವಿಕಲರಿಗೆ 18 ವಯಸಿನವರೆಗೆ ಉಚಿತ ಹಾಗೂ ಸೂಕ್ತವಾದ ಶಿಕ್ಷಣ ನೀಡಬೇಕು. ವಿಶೇಷ ಶಾಲೆಗಳು ಮತ್ತು ಸಮನ್ವಯ ಶಿಕ್ಷಣವನ್ನು ಉತ್ತೇಜಿಸಬೇಕು, ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯಪುಸ್ತಕ ಮತ್ತು ಇತರ ಸಾಮಗ್ರಿಗಳನ್ನು ಉಚಿತವಾಗಿ ಒದಗಿಸಬೇಕು. ಅಂಗವಿಕಲ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಒಂದು ಸಮಗ್ರವಾದ ಯೋಜನೆಯನ್ನು ಸರ್ಕಾರ ತಯಾರಿಸಬೇಕು, ಪಠ್ಯಕ್ರಮದಲ್ಲಿ ಸೂಕ್ತವಾದ ಮಾರ್ಪಾಡುಗಳನ್ನು ತರಬೇಕು.

**3.ತರಬೇತಿ ಮತ್ತು ಉದ್ಯೋಗ :** ಸರಕಾರ ವಿಶೇಷಸಾಮರ್ಥ್ಯತೆವುಳ್ಳವರಿಗೆ ಮೀಸಲಿಡಬಹುದಾದಂತಹ ತರಬೇತಿ ಮತ್ತು ಉದ್ಯೋಗ ಮತ್ತು ಹುದ್ದೆಗಳನ್ನು ಗುರುತಿಸಬೇಕು. ಉದ್ಯೋಗಾವಕಾಶಗಳನ್ನು ಕಲ್ಪಿಸುವಂತಹ ಯೋಜನೆಗಳನ್ನೂ ರೂಪಿಸಬೇಕು.ಇವು ಕನಿಷ್ಠ ಪಕ್ಷ, ಒಟ್ಟು ಹುದ್ದೆಯ ಶೇಕಡ 3ರಷ್ಟಿರಬೇಕು. ಇದರಲ್ಲಿ ಶೇ.1 ಅಂಧರಿಗೆ ಅಥವಾ ಮಂದದೃಷ್ಟಿ, ಶೇ.1 ಶ್ರವಣ ದೋಷವುಳವರಿಗೆ, ಶೇ.1 ಚಲನೆಯಲ್ಲಿ ನ್ಯೂನತೆ ಅಥವಾ ಮಿದುಳುವಾತ ಮೀಸಲು.(ಕರ್ನಾಟಕದಲ್ಲಿ ಶೇ.5). ಭರ್ತಿ ಆಗದೇ ಇರುವ, ಮೀಸಲಾದ ಹುದ್ದೆಗಳನ್ನು ಇತರ ವಿಶೇಷಸಾಮರ್ಥ್ಯತೆವುಳ್ಳವರಿಗೆ ನೀಡಬೇಕು, ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ವಿಶೇಷಸಾಮರ್ಥ್ಯತೆವುಳ್ಳವರಿಗೆ ಮಾಹಿತಿ ಮತ್ತು ವಿವರಗಳನ್ನು ಒದಗಿಸಬೇಕು, ಎಲ್ಲಾ ಸರ್ಕಾರಿ ಮತ್ತು ಸರ್ಕಾರೇತರ ಶಾಲಾ ಕಾಲೇಜುಗಳಲ್ಲಿ ವಿಶೇಷಸಾಮರ್ಥ್ಯತೆವುಳ್ಳವರಿಗೆ ಶೇ.3ರಷ್ಟು ಸೀಟುಗಳನ್ನು ಕಾಯ್ದಿರಿಸಬೇಕು, ಬಡತನ ನಿವಾರಣಾ ಯೋಜನೆಗಳಲ್ಲಿ ಶೇ.3ರಷ್ಟು ಮೀಸಲಿಡಬೇಕು, ಹಾಗೆಯೆ ಸಾರ್ವಜನಿಕ ಕ್ಷೇತ್ರದಲ್ಲಿ ಶೇಕಡ 3 ಉದ್ಯೋಗಾವಕಾಶವನ್ನು ವಿಶೇಷಸಾಮರ್ಥ್ಯತೆವುಳ್ಳ ವ್ಯಕ್ತಿಗಳಿಗೆ ಮೀಸಲಿಡಲಾಗಿದೆ.(ಕರ್ನಾಟಕ ರಾಜ್ಯದಲ್ಲಿ ಶೇಕಡ 5 ಉದ್ಯೋಗವನ್ನು ಮೀಸಲಿಡಲಾಗಿದೆ).ಕೆಲಸದ ಸಂದರ್ಭದಲ್ಲಿ ಅಂವಿಕಲತೆ ಉಂಟಾದ ಯಾವುದೇ ನೌಕರನಿಗೆ ಬಡ್ತಿಯನ್ನು ನಿರಾಕರಿಸಲಾಗದು. ಕೆಲದಿಂದ ತೆಗೆದು ಹಾಕಲಾಗದು.ಅವರಿಗೆ ಪರ್ಯಾಯವಾದ ಕೆಲಸವನ್ನು ಕೂಡಬೇಕು.

**4.ಸಕಾರಾತ್ಮಕ ಕ್ರಿಯೆ :** ಸರ್ಕಾರವು ವಿಶೇಷಸಾಮರ್ಥ್ಯತೆವುಳ ವ್ಯಕ್ತಿಗಳಿಗೆ ಸಾಧನ ಸಲಕರಣೆ ಒದಗಿಸಬೇಕು, ಈ ವ್ಯಕ್ತಿಗಳಿಗೆ ರಿಯಾಯಿತಿ ದರದಲ್ಲಿ ಮನೆ, ವ್ಯಾಪರ ವ್ಯವಸ್ಥೆ, ಸೇವಾ ಸಂಸ್ಥೆ, ವಿಶೇಷ ಮನರಂಜನೆ ವ್ಯವಸ್ಥೆ, ವಿಶೇಷ ಶಾಲೆಗಳ ಸ್ಥಾಪನೆ, ಕಾರ್ಖಾನೆ ಸ್ಥಾಪನೆಗೆ ನಿವೇಶನವನ್ನು ನೀಡುವುದು ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಬೇಕು.

**5.ಸಮದೃಷ್ಟಿ :** ಸರ್ಕಾರಿ ಸಂಚಾರ ವಾಹನಗಳಲ್ಲಿ, ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ, ವಿಶೇಷಸಾಮರ್ಥ್ಯತೆವುಳವರು ಮತ್ತು ಗಾಲಿ ಕುರ್ಚಿಗಳಲ್ಲಿರುವರು ಹತ್ತಿ ಇಳಿಯಲು ವಿಶೇಷ ಸೌಕರ್ಯಗಳ ವ್ಯವಸ್ಥೆಯನ್ನು ಮಾಡಬೇಕು, ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು, ರಸ್ತೆ ದಾಟುವೆಡೆ, ಅಂಧರಿಗೆಂದು ಶಬ್ಧದೊಡನೆ ಬರುವ ಹಸಿರು ದೀಪಗಳನ್ನು, ಉಬ್ಬು ತಗ್ಗುಗಳಿರುವ (ಬಿಳಿಯ) ಪಟ್ಟಿಗಳನ್ನೂ ಮಾಡಿಸಬೇಕು. ಸಾರ್ವಜನಿಕ ಕಟ್ಟಡಗಳಲ್ಲಿ ಮತ್ತು ಶೌಚಾಲಯಗಳಲ್ಲಿ, ವಿಶೇಷಸಾಮರ್ಥ್ಯತೆವುಳವರಿಗೆ ಮತ್ತು ಗಾಲಿ ಕುರ್ಚಿಯಲ್ಲಿರುವವರಿಗೆ ವಿಶೇಷ ಕೈ ಹಿಡಿಗಳು, ಇಳಿಜಾರು, ಮುಂತಾದ ಸೌಲಭ್ಯಗಳನ್ನು ಕಲ್ಪಿಸಬೇಕು, ಅವಶ್ಯವಿದ್ದೆಡೆ, ವಿಶೇಷಸಾಮರ್ಥ್ಯತೆವುಳವರಿಗೆಂದು ಸೂಕ್ತವಾದ ಮುನ್ನೆಚ್ಚರಿಕೆಯ ಸೂಚನೆಗಳನ್ನು ಹಾಕಬೇಕು.

**6.ಸಾಮಾಜಿಕ ಭದ್ರತೆ:** ಸರ್ಕಾವು ತನ್ನ ಹಣಕಾಸಿನ ಮಿತಿಗೆ ಅನುಗುಣವಾಗಿ ಪ್ರತಿಯೊಬ್ಬ ವಿಶೇಷಸಾಮರ್ಥ್ಯತೆವುಳವರಿಗೆ ಪುನರ್ವಸತಿ ನೀಡುವ ವ್ಯವಸ್ಥೆ ಮಾಡಬೇಕು, ಪುನರ್ವಸತಿಗಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳಿಗೆ ಅನುದಾನ ನೀಡಬೇಕು, ವಿಶೇಷಸಾಮರ್ಥ್ಯತೆವುಳವರಿಗೆ ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 2 ವರ್ಷಕ್ಕಿಂತ ಮೇಲ್ಪಟ್ಟ ನೊಂದಾಯಿತ ವಿಶೇಷಸಾಮರ್ಥ್ಯತೆವುಳ ನಿರುದ್ಯೋಗಿಗಳಿಗೆ ವಿಶೇಷಸಾಮರ್ಥ್ಯತೆವುಳ ನಿರುದ್ಯೋಗ ಭತ್ಯೆ ಅವಕಾಶವಿದ್ದಲ್ಲಿ ನೀಡಬೇಕು. ಅಗತ್ಯತೆ ಇದ್ದಲ್ಲಿ ನಿರುದ್ಯೋಗಿಗಳಿಗೂ ಅನ್ವಯಿಸುವ

ವಿಮಾ ಯೋಜನೆಯನ್ನು ರೂಪಿಸಬಹುದು.

**ಆಧಾರ ಗ್ರಂಥಗಳು**

• ಅಂಗವಿಕಲರ ಕಲ್ಯಾಣ ಇಲಾಖೆ ತರಭೇತಿ ಕೈಪಿಡಿ (2003) ಪುಟ ಸಂ. 3,4 ಕರ್ನಾಟಕ ಸರ್ಕಾರ ಬೆಂಗಳೂರು.
• ಇಂದುಮತಿರಾವ್ (2012) "ವಿಶೇಷ ಅವಶ್ಯಕತೆಗಳನ್ನುಳ್ಳ ಮಕ್ಕಳ ಶಿಕ್ಷಣ" ಪುಟ ಸಂ. 16 ಬೆಂಗಳೂರು.
• ಮಾನಸದೇವಿ (2014)"ವಿಕಲಚೇತನರ ಸ್ವಾವಲಂಬನೆಗೆ ಗ್ರಾಮ ಸರ್ಕಾರದ ಬೆಂಬಲ" ಪುಟ ಸಂ. 177 ಬೆಂಗಳೂರು.
• Syed m h. (2006) – encyclopedia of indian education p. No. 97. Pub- anmol. Delhi – 110002.
• Hallahan. D P & Kanuffman J. M (1991) "Exceptional Children: Introduction To Special Education. P. No. 217, Allyn & Boston.
• Samuel ravi. S (2011) – a comprehensive study of education – phi learning private limited – new delhi – 110001 – p.no. 747.

# Publish Research Article
# International Level Multidisciplinary Research Journal For All Subjects

Dear Sir/Mam,

We invite unpublished Research Paper,Summary of Research Project,Theses,Books and Book Review for publication,you will be pleased to know that our journals are

## Associated and Indexed,India

- ✶ International Scientific Journal Consortium
- ✶ OPEN J-GATE

## Associated and Indexed,USA

- Google Scholar
- EBSCO
- DOAJ
- Index Copernicus
- Publication Index
- Academic Journal Database
- Contemporary Research Index
- Academic Paper Databse
- Digital Journals Database
- Current Index to Scholarly Journals
- Elite Scientific Journal Archive
- Directory Of Academic Resources
- Scholar Journal Index
- Recent Science Index
- Scientific Resources Database
- Directory Of Research Journal Indexing

Indian Streams Research Journal
258/34 Raviwar Peth Solapur-413005,Maharashtra
Contact-9595359435
E-Mail-ayisrj@yahoo.in/ayisrj2011@gmail.com
Website : www.isrj.org